ಮಾಡತೊಡಗಿದ್ದ. ಪಾಪ, ಅವಳ ಕೋಪ ಇಳಿಯಲೆಂದು ಹಿರಿಯರು ಸ್ವಲ್ಪ ಹೊತ್ತು ಸುಮ್ಮನಿದ್ದು ಮೆಲ್ಲಗೆ ಮಾತು ತೆಗೆದರು.

'ಮಾಯವ್ವಕ್ಕ, ನಿನಗ ಹೆಂಗ ಸಮಾಧಾನ ಹೇಳೋದವಾ? ನಮ್ಮ ಕಡೆನೂ ಸ್ವಲ್ಪ ನಜರಚೂಕು ಆತು. ಇಷ್ಟೆಲ್ಲ ಗದ್ದಲ ಆಗತೇತಿ ಅಂದಿದ್ರ ನಾವು ಇಲ್ಲಿಂದ ಕದಲತಿರಲಿಲ್ಲ. ಆಂವ ಇನ್ನೊಮ್ಮಿ ಈ ಕಡಿ ಬರ್ಲಿ ನೋಡೋಣು, ಅಂವನ್ನ ಕಡದ ತುಂಡ ತುಂಡ ಮಾಡತೇವಿ. ಏಯ್ ದೇವಣ್ಣ, ನೀನೂ ಎಂಥವ್ನೊ? ಅಂವ ಬಂದಕೂಡಲೆ ಹೆದರಿ ನಿನ್ನ ಹೇಂತಿ ಕಳಿಸಲಿಕ್ಕೆ ತಯಾರಾಗಿದ್ದೆಲ್ಲೋ, ನಾಚಿಕಿ ಅನಿಸಂಗಿಲ್ಲ ನಿನಗ? ಹಿಂದೆ ಅಂವೊಮ್ಮೆ ಬಂದು ಹೋಗಿದ್ದ ಅಂತೀದಿ. ಆವಾಗಾದ್ರೂ ವಿಷಯ ಹಿಂಗಿಂಗಂತ ನಮಗ ಹೇಳಬೇಕೊ ಬ್ಯಾಡೊ? ಎಲ್ಲಾರೂ ಹೋಗಿ ಹೊಂಗಲ ಪೋಲಿಸ್ ಸ್ಟೇಷನ್ನಿಗೆ ಕಂಪ್ಲೇಂಟ್ ಕೊಟ್ಟು ಬರೋದು ಚುಲೋ ಅನಿಸ್ತೈತಿ. ಹೆಂಗೊ ದೇವಣ್ಣ?'

ದೇವಣ್ಣ ಅದಕ್ಕೆ ಏನೂ ಉತ್ತರ ಹೇಳಲಿಲ್ಲ. ಇನ್ನೊಬ್ಬರು 'ವಿಚಾರ ಮಾಡೋಣು. ಆದರ ನನಗ ಅನಿಸೋ ಪ್ರಕಾರ ಅಂವ ಇನ್ನೇನು ಬರಲಿಕ್ಕಿಲ್ಲ.' ಮಾಯಕ್ಕ ಮಾತ್ರ ಮಾತಿಲ್ಲದೆ ಕುಳಿತಿದ್ದ ಶಿವಣ್ಣನಿಗೆ ಕಣ್ಣಲ್ಲಿಯೆ ಕೃತಜ್ಞತೆ ಹೇಳಿದಳು. "ಮಾಯಕ್ಕ ಬಾಳ ಗಟ್ಟಿಗಿತ್ತಿ. ಆಕೀ ಅಂಜಬುರುಕಿ ಅಲ್ಲ, ಯಾರರ ಮೈ ಮ್ಯಾಲ ಬಿದ್ದರ, ತಡ್ಡಬೀಜ ಹರಿಯಾಕಿ.' ಮುಂದೆ ನಾಲ್ಕೈದು ದಿನಗಳಾದ ಮೇಲೆ ದುಂಡಪ್ಪಕಾಕಾ ಎಲ್ಲರನ್ನೂ ಕರೆದು ದೇವಪ್ಪನಿಗೆ ತುಸು ಬಿಸಿ ಮುಟ್ಟಿಸಿದ. ದುಂಡಪ್ಪಕಾಕಾನದು ಅತಿಯಾಯಿತು ಅನಿಸಿತು ದೇವಣ್ಣನಿಗೆ. ತನಗೆ ಎಲ್ಲರೂ ಎಷ್ಟೊಂದು ಅವಮಾನ ಮಾಡುತ್ತಿದ್ದಾರೆ. ಆ ರಾತ್ರಿಯೇ ದ್ಯಾವಣ್ಣ ಮಾಯಕ್ಕನಿಗೆ ಅಂದನಂತೆ. 'ಮುತ್ತಪ್ಪ ಸುಮ್ಮನಿರೊ ಮನಸ್ಯಾ ಅಲ್ಲ. ಮತ್ತೆ ಹುಡುಕ್ಕೊಂಡ ಬಂದ್ರು ಬರಬಹುದು. ಅದಕ್ಕ ಒಂದಷ್ಟ ದಿನ ನೀನು ತವರಮನ್ಯಾಗ ಇರು. ಆಮ್ಯಾಲ ನಾನು ಕರಕೊಂಡು ಬರ್ತೀನಿ' ಆ ಮಾತು ಕೇಳಿ ಅವಳಿಗೆ ತೀವ್ರ ಆಘಾತವಾಯಿತು.

ಹಿರಿಯರು ಅಷ್ಟೆಲ್ಲ ಹೇಳಿ ಹೋಗಿದ್ದು ಬೋರ್ಗಲ್ಲ ಮೇಲೆ ಮಳೆ ಸುರಿದಂತಾಯಿತಲ್ಲ! ಈತ ಇಷ್ಟು ಹೇಡಿಯೆ? ತಾನು ಸುತಾರಾಂ ತವರುಮನೆಗೆ ಹೋಗಲಾರೆ. ಹೀಗೆಯೇ ತಿಂಗಳುಗಟ್ಟಲೆ ನಡೆಯಿತು. ಆಕೆ ಒಲ್ಲೆಯೆನ್ನುವುದು, ಇವನು ಹೋದರೆ ಒಳ್ಳೆಯದೆಂದು ಹೇಳುವುದು ನಡೆದೇ ಇತ್ತು. ಗಂಡ ಹೆಂಡತಿಯ ಜಗಳ ತಾರಕಕ್ಕೇರಿತು. ತಾನು ಹಿಂದೆ ಅವಳ ಊರಿಗೆ ಹೋದದ್ದೆ ತಪ್ಪಾಯಿತೆಂದು, ಅವಳನ್ನು ಮದುವೆಯಾದದ್ದು ಮತ್ತೂ ದೊಡ್ಡ ತಪ್ಪಾಯಿತೆಂದಾಗ ಮಾಯಕ್ಕನ ಮೈಯೆಲ್ಲ ಉರಿಯಿತು. 'ಮುತ್ತಪ್ಪ ತಿರುಗಿ ಬರಬಹುದೋ ಹೇಗೆ?', 'ಹೆಂಡತಿಯನ್ನು ತವರಿಗೆ ಕಳಿಸುವುದು ಒಳ್ಳೆಯದೋ, ಕೆಟ್ಟದ್ದೋ?' ತನ್ನ ಸಂದಿಗ್ಧತೆಗಳನ್ನು ಪ್ರಶ್ನೆಗಳನ್ನಾಗಿ ಮಾಡಿ ತನ್ನ ಕೆಲವು ಆಪ್ತ ಗೆಳೆಯರ ಎದುರು ಇಟ್ಟ. ದುಂಡಪ್ಪಕಾಕಾನನ್ನು ಕೇಳಿದರೆ ಆತ ಯಾವಾಗಲೂ ಅವಳ ಪರವಾಗಿಯೇ ಹೇಳುವವನು. ಗಿಣಿಶಾಸ್ತ್ರದ ಗಿರಿಯಪ್ಪನಂಥವರು ಇಲ್ಲಿ ಇದ್ದಿದ್ದರೆ ಅವರನ್ನು ಕೇಳಬಹುದಿತ್ತು. ಈಗಂತೂ ಅವ್ವನ ನೆನಪು ಎಷ್ಟೊಂದು ಬರುತ್ತಿದೆ. ಆಕೆ ಸತ್ತು ವರ್ಷವಾಯಿತು. ತಾನು ಮತ್ತೆ ಮದುವೆಯಾಗಿದ್ದಕ್ಕೆ ತುಂಬ ಸಿಟ್ಟಾಗಿದ್ದಳು. ಎರಡು ಮೂರು ಸಲ ಹೋದರೂ ತನ್ನ ಜೊತೆ ಮಾತಾಡಿರಲಿಲ್ಲ. ಹೋದ ವರ್ಷ ಚಳಿಜ್ವರಯೆಂದು ಮಲಗಿದವಳು ಮತ್ತೆ ಮೇಲೇಳಲಿಲ್ಲ. ತಾನು ಹೋದಾಗ ಆಕೆ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಅವಳನ್ನು ಮಣ್ಣುಕೊಟ್ಟು ಬರಬೇಕಾದರೆ ಎಲ್ಲ ಖಾಲಿಯಾದಂತಹ ಅನುಭವ.

ಸಿಂದೋಗಿಯಲ್ಲಿ ಎಲ್ಲರೂ ತನ್ನನ್ನು ವಿಚಿತ್ರವಾಗಿ ನೋಡುವವರೆ. ಯಾಕೆಂದು ಆಮೇಲೆ ಅನಿಸಿತು. ಮಾಯಿಯೂ ತನ್ನೊಡನೆ ಇದ್ದುದಕ್ಕೆ ಇರಬೇಕು. ಯಾರು? ಎಲ್ಲಿಯವಳು? ಅವರಲ್ಲಿ ಹಲವು ಪ್ರಶ್ನೆಗಳಿದ್ದವು. ಕೇಳುವ ಸಂದರ್ಭವಲ್ಲವೆಂದು ಸುಮ್ಮನಾಗಿರಬೇಕು. ಗಿಳಿಯ ಮುಂದೆ ಪ್ರಶ್ನೆಯಿಡುವಂತೆ ದೇವಪ್ಪ ತನ್ನ ಸ್ನೇಹಿತರೆದುರು ಪ್ರಶ್ನೆಯಿಡಲು ಅವರೆಲ್ಲರೂ ಒಂದೇ ಅಭಿಪ್ರಾಯಕ್ಕೆ ಬಂದರು. ಮುತ್ತಪ್ಪನಂತಹ ಕೆಟ್ಟ ಮನುಷ್ಯ ಈ ಜಗತ್ತಿನಲ್ಲಿ ಇಲ್ಲವೆಂದೂ ಸುಮ್ಮನೆ ಮಾಯವ್ವನ ಸಲುವಾಗಿ ಜೀವಕ್ಕೆ ಅಪಾಯ ತಂದುಕೊಳ್ಳುವುದು ಮೂರ್ಖತನವೆಂದೂ ಹೆಂಡತಿ ತವರಿಗೆ ಹೋಗಲು ನಿರಾಕರಿಸುತ್ತಿದ್ದಾಳೆಂದರೆ ಆಕೆಗೆ ದೇವಪ್ಪನನ್ನು ಸಾಯಿಸುವ ಯೋಚನೆಯಿರಬೇಕೆಂದೂ ಶಿವಣ್ಣನ ಜೊತೆ ಆಕೆ ನಿಕಟವಾಗಿ ವರ್ತಿಸುತ್ತಿರುವ ಹಿನ್ನೆಲೆ ಬಹುಶಃ ಅದೇ ಇರಬೇಕೆಂದೂ ಹೋಟೇಲನ್ನು ಅವರಿಬ್ಬರೂ ತಮ್ಮಂತೆ ಮಾಡಿಕೊಳ್ಳಲು ಬಯಸುತ್ತಿರಬೇಕೆಂದೂ ನೂರಾರು ಚಿತ್ರ ವಿಚಿತ್ರ ಸಂಭವಗಳನ್ನು ಹೇಳಿದರು. ದೇವಣ್ಣನಿಗೆ ಅವರು ಹೇಳುವ ಸಂಭವನೀಯತೆಗಳು ಆ ದಿನವೆ ಆಗಬಹುದೆಂದು ಅನಿಸತೊಡಗಿ ಕೂತರೆ ಕೂಡುತ್ತಿರಲಿಲ್ಲ. ನಿಂತರೆ ನಿಲ್ಲುತ್ತಿರಲಿಲ್ಲ. ಶಿವಣ್ಣ ಮತ್ತು ಮಾಯಕ್ಕನನ್ನು ಕಂಡು ಸಿಡಿಸಿಡಿ ಮಾಡತೊಡಗಿದ. ಈಗ ಅವನಿಗೆ ಮುತ್ತಪ್ಪನಿಗಿಂತ ತನ್ನ ಹೆಂಡತಿಯೆ ಹೆಚ್ಚು ಕೆಟ್ಟವಳಾಗಿ, ತನ್ನನ್ನು ಕೊಲ್ಲಲು ಕಾದಿರುವ ಮಾರಿಯಾಗಿ ಕಾಣತೊಡಗಿದಳು. ಮಧ್ಯಾಹ್ನಕ್ಕೊಮ್ಮೆ, ಸಂಜೆಗೊಮ್ಮೆ, ಮಲಗಿದಾಗಲೊಮ್ಮೆ ಆಕೆ ಕೆಲವು ದಿವಸ ತವರಿಗೆ ಹೋದರೆ ಒಳ್ಳೆಯದಿತ್ತೆಂದು ಹೇಳುತ್ತಲೇ ಇರುವವನು. ಆಕೆಗಂತೂ ಅವನ ಮಾತುಗಳು ಮುಳ್ಳುಗಳಿಗಿಂತಲೂ ಚೂಪಾಗಿ ಚುಚ್ಚತೊಡಗಿದವು.

'ದೂರದಿಂದ ಕೇಳಾಕ ಬರ್ತೈತಿಲ್ಲೊ? ಅಷ್ಟು ಸಮೀಪ ಹೋಗಿ ಮಾತಾಡ್ತಾ ಇರ್ತಿ', ಶಿವಣ್ಣನ ಮೈಮೇಲೆ ಬಿದ್ದು ಮಾತಾಡಿಸುತ್ತಾಳೆ ಎನ್ನುವುದು ಜನರ ಅಭಿಪ್ರಾಯ, ತನ್ನದಲ್ಲ ಎಂದು ಅವಳನ್ನು ಚುಚ್ಚಿದ. ಆಕೆ ತುಸು ಬಿರುಸಾಗಿಯೇ ಅಂದಳು. 'ಇನ್ನೂ ಅವನ ಮೈಮ್ಯಾಲ ಬಿದ್ದಿಲ್ಲ. ಈಗ ನೀ ಹೇಳಿದಿಯಲ್ಲ. ಚುಲೋ ಆತು. ಅದರ ಬಗ್ಗೆ ವಿಚಾರ ಮಾಡ್ತೇನಿ.'

ಎಂದೂ ಹೊಡೆಯುವುದಿಲ್ಲವೆಂದು ಹಿಂದೆ ಹೇಳಿದ್ದು ನೆನಪಿದ್ದರೂ ಅವಳ ಕಪಾಳಕ್ಕೆ ಜೋರಾಗಿ ಹೊಡೆದ. ಅವಳ ಕಣ್ಣಿಗೆ ಕತ್ತಲು ಕವಿದಂತಾಯಿತು. 'ಮುತ್ತಪ್ಪ ಸೈತ ಇಷ್ಟು ಜೋರಾಗಿ ನನಗ ಹೊಡೆದಿರಲಿಲ್ಲ' ಎಂದುಕೊಂಡಳು. ದೇವಪ್ಪನ ಋಣ, ಸಾಕಿನ್ನು ಎಂದು ಆಕೆ ಎದ್ದಳು. ರಾತ್ರಿಯಾಗಿತ್ತು. ಭಯಾನಕವೆನಿಸುವ ಕತ್ತಲು ಎಲ್ಲೆಡೆಗೂ ರಾಚಿತ್ತು. ಅವಳು ಹೊಸ್ತಿಲು ದಾಟುವುದನ್ನು ಕಂಡ ದೇವಪ್ಪನಿಗೆ ದಿಗಿಲಾಯಿತು.

'ಸಿಟ್ಟಿನ್ಯಾಗ ಹೊಡೆದೆ. ದಯಮಾಡಿ ನನ್ನ ಕ್ಷಮಾ ಮಾಡು.' ಆತ ಏನೇ ಹೇಳಿದರೂ ಆಕೆ ಕೇಳಲಿಲ್ಲ. 'ನನ್ನ ಮುಟ್ಟಬ್ಯಾಡ. ಮುಟ್ಟಿದೀಯಂದ್ರ ದೊಡ್ಡ ಅನಾಹುತ ಆಕ್ಕೇತಿ. ನಾ ಸುಟ್ಟಗೊಂಡ ಸಾಯ್ತೇನಿ ನೋಡು. ದೂರ ಸರಿ.' ಕೈಯಲ್ಲಿ ಕಡ್ಡಿಪೆಟ್ಟಿಗೆ ಹಿಡಿದಿದ್ದಳು. ದೇವಪ್ಪ ಅಂಗಡಿಯ ಹೊರಗೆ ಮಲಗಿದ್ದ ಗದಿಗೆಪ್ಪನನ್ನು ಒದರಿ 'ಏಯ್ ಗದಿಗೆಪ್ಪ, ಓಡಿಹೋಗಿ ದುಂಡಪ್ಪಕಾಕಾನನ್ನ ಕರಕೊಂಡ ಬಾ.' ಆತ ಇಲ್ಲಿಂದಲೆ 'ಕಾಕಾ, ಓ ಕಾಕಾ' ಎನ್ನುತ್ತ ಓಡಿದ. 'ನೀ ಎಲ್ಲಿಗೋ ಹೋದ್ರೂ ಮುಂಜಾನಿ ಹೋಗುವಂತೆ' ಆತ ಗೋಗರೆಯತೊಡಗಿದ. ದುಂಡಪ್ಪಕಾಕಾ ಬರಲು ಎಷ್ಟೊತ್ತು ಮಾಡುತ್ತಿದ್ದಾನೆ. ಗಂಡನ ಕಣ್ಣೀರು ಲಕ್ಷಿಸದೆ ತನ್ನ ಸಂಕಟವನ್ನು ಗಂಟಲಿದಲ್ಲಿನ ಕಫವನ್ನಾಗಿ ಮಾಡಿ ರಸ್ತೆ ಪಕ್ಕ ಉಗುಳಿ ಮುಂದೆ ಹೆಜ್ಜೆಯಿಟ್ಟಳು. ಕೆರೆಯ ಕಪ್ಪೆಗಳ ಸದ್ದು ಕೇಳುತ್ತಿತ್ತು. ಯಾರೊಬ್ಬರೂ ಆಕೆಯನ್ನು ನೋಡಲಿಲ್ಲವೆ? ಯಾರೊಬ್ಬರಿಗೂ ಆಕೆ ನಡೆದುಹೋಗುತ್ತಿರುವ ಶಬ್ದ ಕೇಳಲಿಲ್ಲವೆ? ಇವನು ಉದ್ವಿಗ್ನನಾದ. ತಾನು ಇಷ್ಟು ಕೆಟ್ಟದಾಗಿ ನಡೆದುಕೊಳ್ಳಬಾರದಾಗಿತ್ತು. ಒಬ್ಬನೆ ಅಳತೊಡಗಿದ. ಹೊಟ್ಟೆ ಕಲಸಿದಂತಾಗಿ ವಾಂತಿ ಮಾಡಿಕೊಂಡ. ಅಕಸ್ಮಾತ್ ಆಕೆ ಸತ್ತುಹೋದರೆ? ಅವನ ತಲೆ ಗಿರ್ರೆಂದಿತು!

***

ಆಕೆ ಮರೆಯಾಗುವ ಮುನ್ನ ತಾನು ಒದರಿದ್ದೆ. 'ಓ, ಮಾಯಿ, ದಯಮಾಡಿ ಕ್ಷಮಾ ಮಾಡು. ಹೊಳ್ಳಿ ಬಾ.' ಅದು ಅವಳಿಗೆ ಕೇಳಿಸಲಿಲ್ಲವೆ? ಕೇಳಿಸಿದ್ದರೂ ಕೇಳಿಲ್ಲವೆಂಬಂತೆ ಹೋದಳು. ತಿರುಗಿ ಬರಬಹುದೆಂಬುದು ಇವನ ನಂಬಿಕೆ. ಹಿಂದೆ ಒಂದು ಸಲ ಹೀಗೆಯೇ ಆಗಿತ್ತಲ್ಲವೆ? ಇದೇ ತರಹ ನಿಶ್ಚಲ ರಾತ್ರಿ. ಆಕೆ ಜಗಳಾಡಿ ಕೈಯಲ್ಲೊಂದು ಚೀಲ ಹಿಡಿದು ಹೊರಹೋದಳು. ಇವನು ಬೆನ್ನುಹತ್ತಿ ಹೋಗಬೇಕೆನ್ನುವಷ್ಟರಲ್ಲಿ ಎಲ್ಲಿ ಮರೆಯಾದಳೊ ಗೊತ್ತೇ ಆಗಲಿಲ್ಲ. ತೀರ ಸೋತ ಮುಖದೊಡನೆ ತಿರುಗಿಬಂದಿದ್ದ.

